
KARNATAKA REGIONAL ORGANISATION FOR SOCIAL SERVICE
KROSS

ಖಾಸಗೀ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 19 ಏಪ್ರಿಲ್ 2014 – ಜೂನ್ 2014



## "ವಿಶ್ವ ಒಂದು ಕುಟುಂಬ, ಸರ್ವರಿಗೂ ಆಹಾರ – 2025"

ಈ ವಿಶ್ವದಲ್ಲಿ ಎಲ್ಲರಿಗೂ ಸಾಕಾಗುವಷ್ಟು ಆಹಾರ ಸಂಪನ್ಮೂಲಗಳಿದ್ದರೂ ಸುಮಾರು 100 ಕೋಟಿ ಜನರು ಹಸಿವಿನಿಂದ ಜೀವಿಸಬೇಕಾಗಿದೆ. ಇದು ವಿಶ್ವ ಈ ಜನರಿಗೆ ಬಗೆದ ಅತೀ ದೊಡ್ಡ ಅಪರಾಧ ಹಾಗೂ ವಂಚನೆಯಾಗಿದೆ.



ಮುಖ್ಯ ಪರಿಪಾಲಕರು
**ಸ್ವಾಮಿ ಪೀಟರ್ ಬ್ಯಾಂಕ್**

ಮುಖಪುಟ ವಿನ್ಯಾಸ
**ಅನೂಷ ಗ್ರಾಫಿಕ್ಸ್**

ಒಳ ಪುಟಗಳಲ್ಲಿ

**ಹಕ್ಕು ಆಧಾರಿತ ಸಾಮಾಜಿಕ ಪರಿವರ್ತನೆ :**
**ಸುಸ್ಥಿರ ಅಭಿವೃದ್ಧಿ: ನಮ್ಮೆಲ್ಲರ ಹಕ್ಕು ಮತ್ತು ಹೊಣೆ**
ಶ್ರೀ ಡೇವಿಡ್ ಕುಮಾರ್

**ಹಾಳಾಗದಿರಲಿ ಅನ್ನ, ರೈತ ಬಾಳಾಗಲಿ ಚಿನ್ನ**
ಶ್ರೀ ಜಿ.ಯಿಂ. ವರ್ಗೀಸ್

**ಬಿದಾಯಿ ಯೋಜನೆ**
ಶ್ರೀ ಜಿ.ಯಿಂ. ವರ್ಗೀಸ್

**ವಾರ್ತಾ ವಿಶೇಷ**

**ಜೀವನ ಕಥನ :**
**ದೀನರ ಧ್ವನಿ – ಶ್ರೀಮತಿ ವಾಣಿ**

## ಓದುಗರೊಂದಿಗೆ ಕ್ಷಣ ಹೊತ್ತು ...

ಇತ್ತೀಚೆಗೆ ಸಿ.ರಂಗರಾಜನ್ ಸಮಿತಿ ಸಲ್ಲಿಸಿದ ವರದಿಯ ಪ್ರಕಾರ, ಪ್ರತೀ 10 ಭಾರತೀಯರಲ್ಲಿ 3 ಜನರು ಕಡು ಬಡವರು. ಇವರ ಪ್ರತಿದಿನದ ಖರ್ಚು 32 ರೂಪಾಯಿಗಳು!. ಈ ವರದಿಯು ಚರ್ಚೆಗೆ ಗ್ರಾಸವಾಗಿ, ಟೀಕೆಗೆ ಗುರಿಯಾಗಿದೆ. ಪ್ರಸ್ತುತ ಒಂದು ಕೆ.ಜಿ. ಈರುಳ್ಳಿಯ ಬೆಲೆ 50 ರಿಂದ 60 ರೂಪಾಯಿಗಳು, ಸಾಧಾರಣ ಅಕ್ಕಿಯ ದರ 34 ರೂಪಾಯಿಗಳು ಇತ್ಯಾದಿ ಇರುವಾಗ, ದಿನಕ್ಕೆ 32 ರೂಪಾಯಿಗಳಿಂದ ಬದುಕು ಸಾಧ್ಯವೇ? ಬಡತನವನ್ನು ಕೇವಲ ಆರ್ಥಿಕತೆಯಿಂದಲೇ ಅಳೆಯಲು ಸಾಧ್ಯವೇ? ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ, ತಲಾ ಆದಾಯ, ಆರೋಗ್ಯ ಮತ್ತು ಶಿಕ್ಷಣ ಸೂಚಿಗಳು ಸಹ ಬಡತನವನ್ನು ಅಳೆಯುವ ಮಾನದಂಡಗಳಾಗಿವೆ. ಈ ಮಾನದಂಡವನ್ನು ಪರಿಗಣಿಸಿದಲ್ಲಿ ಹತ್ತರಲ್ಲಿ ಏಳು ಜನ ಭಾರತೀಯರು ಬಡತನ ರೇಖೆಯಲ್ಲಿರುವವರು ಆಗಿದ್ದಾರೆ.

ಆಹಾರದ ಹಕ್ಕನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ. ಇದರಲ್ಲಿ ಸರ್ವರಿಗೂ ಆಹಾರದ ಲಭ್ಯತೆ ಇದೆಯೇ? ಅಪೌಷ್ಠಿಕತೆ ನಮ್ಮ ದೇಶದ ಅಭಿವೃದ್ಧಿಯ ಮುಂಚೂಣಿ ರಾಜ್ಯಗಳನ್ನು ಆಕ್ರಮಿಸಿದೆ. ಎಷ್ಟು ಮಹಿಳೆಯರು ಮತ್ತು ಮಕ್ಕಳು ಸಮತೋಲನದಿಂದ ಕೂಡಿದ ಆಹಾರವನ್ನು ಸೇವಿಸುತ್ತಿದ್ದಾರೆ? ಸಂಯುಕ್ತ ರಾಷ್ಟ್ರಗಳ ವರದಿಯ ಪ್ರಕಾರ 2.1 ದಶಲಕ್ಷ 5 ವರ್ಷದೊಳಗಿನ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಾ ಅಸುನೀಗುತ್ತಿದ್ದಾರೆ. ಜಗತ್ತಿನ ಶೇಕಡಾ 30 ರಷ್ಟು ಅಪೌಷ್ಠಿಕ ಮಕ್ಕಳು ಭಾರತದಲ್ಲಿದ್ದಾರೆ ಎನ್ನುತ್ತದೆ ಮತ್ತೊಂದು ವರದಿ. ಹಾಗಾದರೆ 'ಅನ್ನ ಭಾಗ್ಯ ಯೋಜನೆ, ಬಿಸಿಯೂಟ ಯೋಜನೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳು ಎಷ್ಟು ಸಮರ್ಪಕವಾಗಿವೆ.

ವಿವಿಧ ಸರ್ಕಾರಿ ಯೋಜನೆಗಳು ಅತ್ಯುತ್ತಮವಾಗಿದ್ದರೂ, ಸಮರ್ಪಕ ಅನುಷ್ಠಾನದ ಕೊರತೆ ಎದ್ದು ಕಾಣುತ್ತದೆ. ಮಹಾತ್ಮ ಗಾಂಧೀಜಿ ನುಡಿಯುವಂತೆ 'There is enough for everyone's need but not enough for everyone's greed' ಸರ್ವರ ಅಗತ್ಯಕ್ಕೆ ಬೇಕಾದಷ್ಟು ಇದೆ ಆದರೆ ಪ್ರತಿಯೊಬ್ಬರ ಸ್ವಾರ್ಥಕ್ಕೆ ಸಾಕಷ್ಟು ಇಲ್ಲ! ಹೌದು, ಸ್ವಾರ್ಥ ಹಾಗೂ ಕೊಳ್ಳುಬಾಕ ಸಂಸ್ಕೃತಿ ಅಧಿಕವಾಗುತ್ತಿದೆ. ಬಡವರ ಮತ್ತು ಉಳ್ಳವರ ಅಂತರ ದಿನೇ ದಿನೇ ಹೆಚ್ಚಾಗುತಿದೆ.

ನಮ್ಮ ಗೋದಾಮುಗಳಲ್ಲಿ ಕೊಳೆತು ನಾಶವಾಗುತ್ತಿರುವ ಆಹಾರ ಸಾಮಾಗ್ರಿಗಳು, ಕಾಳಸಂತೆ ಸೇರುವ ಸಾರ್ವಜನಿಕ ಪಡಿತರ, ಅಧಿಕಾರಶಾಹಿಯ ನಿರ್ಲಿಪ್ತ ಧೋರಣೆ, ಚುನಾಯಿತ ಪ್ರತಿನಿಧಿಗಳಲ್ಲಿ ಇಚ್ಛಾಶಕ್ತಿಯ ಕೊರತೆಯಿಂದ 'ಸರ್ವರಿಗೂ ಆಹಾರ ಲಭಿಸಿ, ನಾವೆಲ್ಲರೂ ಒಂದು "ವಿಶ್ವಕುಟುಂಬ"ದ ಸದಸ್ಯರೆಂಬುದನ್ನು ಮರೆಯಿಸಿದೆ. ಹಸಿವಿನಿಂದ ಯಾವುದೇ ಪ್ರಜೆ ಸತ್ತರೂ ಅದು ಸಾರ್ವಜನಿಕರು ತಲೆ ತಗ್ಗಿಸುವಂತಹ ವಿಚಾರ. ಇದರ ಬಗ್ಗೆ ನಮ್ಮ ಸರ್ವೋನ್ನತ ನ್ಯಾಯಲಯ ಈಗಾಗಲೇ ಸರ್ಕಾರಕ್ಕೆ ಛೀಮಾರಿ ಹಾಕಿ, ವಿವಿಧ ಹಂತದ ಸರ್ಕಾರಗಳನ್ನೇ ಹೊಣೆಗಾರರನ್ನಾಗಿಸಿದೆ. ಸರ್ಕಾರಗಳು, ನೇಗಿಲಯೋಗಿಗೆ ತನ್ನ ಬೆಳೆಗೆ ತಕ್ಕ ಬೆಲೆ ನಿಗದಿ ಪಡಿಸಿ, ಕೃಷಿ ನೀತಿಯನ್ನು ಜಾರಿಗೊಳಿಸಿ ಸಾಕಷ್ಟು ಆಹಾರ ಉತ್ಪಾದನೆಗೆ ಒತ್ತು ಕೊಟ್ಟು ಧನ್ಯತಾಭಾವ ತೋರಬೇಕಿದೆ. ಸರ್ವ ಸಮುದಾಯಗಳು ಆಹಾರ ಹಕ್ಕನ್ನು ಪಡೆದು ಸಂತುಷ್ಠಿ ಜೀವನ ನಡೆಸಬೇಕಿದೆ. ಈ ನಿಟ್ಟಿನಲ್ಲಿ 'ಹಾಳಾಗದಿರಲಿ ಅನ್ನ, ರೈತ ಬಾಳಾಗಲಿ ಚಿನ್ನ' ಬೆಳಕು ಚೆಲ್ಲಲಿದೆ. ಅಂತೆಯೇ 'ಅಲೆಗಳು' ಸುಸ್ಥಿರ ಅಭಿವೃದ್ಧಿ: ನಮ್ಮೆಲ್ಲರ ಹಕ್ಕು ಮತ್ತು ಹೊಣೆ, 'ಬಿದಾಯಿ' ಯೋಜನೆ, ವಾರ್ತಾ ವಿಶೇಷ, ದೀನರ ಧ್ವನಿ ಶ್ರೀಮತಿ ವಾಣಿ ಹೊತ್ತು ತಂದಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಮಳೆಯ ಕೊರತೆಯಿದೆ, ಸಾಕಷ್ಟು ಮಳೆ, ಹೇರಳ ಬೆಳೆ ನಮ್ಮದಾಗಲಿ ಎಂದು ಆಶಿಸೋಣ.

ಇಂತೀ
**ವಂ. ಸ್ವಾಮಿ. ಪೀಟರ್ ಬ್ಯಾಂಕ್**
ನಿರ್ದೇಶಕರು, ಕ್ರಾಸ್ ಸಂಸ್ಥೆ.

# ಹಕ್ಕು ಆಧಾರಿತ ಸಾಮಾಜಿಕ ಪರಿವರ್ತನೆ :

## ಸುಸ್ಥಿರ ಅಭಿವೃದ್ಧಿ: ನಮ್ಮೆಲ್ಲರ ಹಕ್ಕು ಮತ್ತು ಹೊಣೆ

## ಪ್ರಶಿಕ್ಷಣ ಮಾಲೆ

ಶ್ರೀ ಡೇವಿಡ್ ಕುಮಾರ್, ಬೆಂಗಳೂರು

ನಾವು ಬೆವರನು ಸುರಿಸಿ ದುಡಿಯುವಜನ
ನಮ್ಮ ಬೆವರಿನ ಪಾಲನು ಕೇಳುವೆವು
ತುಂಡು ಭೂಮಿಯಲ್ಲ; ಒಂದು ದೇಶವಲ್ಲ
ಇಡೀ ಭೂಗೋಳವನೆ ಕೇಳುವೆವು //

ಕೋಟಿಗಾನಹಳ್ಳಿ ರಾಮಯ್ಯ

ನಮ್ಮ ದೇಶವನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವೆಂದು ಕರೆಯಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಗಾಗ ತಮ್ಮ ಅನುಕೂಲ ಮತ್ತು ಹಿತಾಸಕ್ತಿಗಳಿಗೆ ತಕ್ಕಂತೆ 'ಅಭಿವದ್ಧಿ'ಯನ್ನು ವ್ಯಾಖ್ಯಾನಿಸುತ್ತಿದ್ದು ಅದರ ಪ್ರಯೋಜನ ಕೇವಲ ಶ್ರೀಮಂತ ವರ್ಗಕ್ಕೆ ತಲುಪುತ್ತಿರುವುದು ದುರದೃಷ್ಟಕರ. ಕೆಲವೇ ಉದ್ದಿಮೆದಾರರ ಏಳಿಗೆಗಾಗಿ ನಮ್ಮೆಲ್ಲಾ ಪ್ರಾಕೃತಿಕ ಸಂಪನ್ಮೂಲಗಳಾದ ಅರಣ್ಯ, ಮರಳು, ಖನಿಜಗಳು, ತೈಲ, ನೀರು ಇತ್ಯಾದಿಗಳು ದಿನೇ ದಿನೇ ಬರಿದಾಗುತ್ತಿವೆ. ಏಷ್ಯಾಖಂಡದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳು ನಮ್ಮದೇಶದಲ್ಲಿವೆ ನಿಜ ಆದರೆ 79% ಗ್ರಾಮೀಣಜನರು ಇನ್ನೂ ಬಯಲು ಮಲ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದಾಗಿ ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತ (ಕುಬ್ಜತೆ) ಕಂಡುಬರುತ್ತಿದ್ದು ಬುದ್ಧಿಶಕ್ತಿಯ ಬೆಳವಣಿಗೆಯಲ್ಲಿಯೂ ಹಿನ್ನಡೆಯಾಗುತ್ತಿದೆ. ಇನ್ನೊಂದೆಡೆ ನೋಡಿದರೆ ಬಹು ರಾಷ್ಟ್ರೀಯ ಕಂಪನಿ ಮತ್ತು ವಿದೇಶಿ ಬಂಡವಾಳ ಹರಿದು ಬರುತ್ತಿದ್ದು ನೌಕರಿ ಸೃಷ್ಟಿಯಾಗುತ್ತಿದ್ದರೂ ಒಬ್ಬ ಸಾಮಾನ್ಯ ಕಾರ್ಮಿಕನ ಸಂಬಳಕ್ಕಿಂತ ಕಂಪನಿಯ ಮುಖ್ಯ ವ್ಯವಸ್ಥಾಪಕ ಅಧಿಕಾರಿಯ ಸಂಬಳವು ಸುಮಾರು 295ರಷ್ಟು ದುಪ್ಪಟ್ಟಾಗಿದೆ! ಯಾಕೆ ಈ ಅಂತರ ಮತ್ತು ವ್ಯತ್ಯಾಸ ? ಅಂದರೆ 'ಅಭಿವದ್ಧಿ ಹಾದಿ ತಪ್ಪಿದ್ದೆಲ್ಲಿ?' ಅಭಿವೃದ್ಧಿ'ಯ ಪಾಲುದಾರರು ಯಾರಾಗಿರಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ತಳಮಟ್ಟದಲ್ಲಿ ಆಗುವ ಮತ್ತು ಆಗಬೇಕಾಗಿರುವ 'ಅಭಿವೃದ್ಧಿ'ಯ ಪ್ರಕ್ರಿಯೆಯಲ್ಲಿ ಜನರ ಪಾಲುದಾರಿಕೆಯನ್ನು ಅರಿತುಕೊಳ್ಳೋಣ.

**ಅಭಿವೃದ್ಧಿಯ ಮೂಲ ಉದ್ದೇಶಗಳು:**

ಕೇವಲ ಭೌತಿಕ ಬದಲಾವಣೆಗಳನ್ನು ಅಂದರೆ ಹೆದ್ದಾರಿಗಳು, ಮೇಲು ಸೇತುವೆಗಳು, ಬಹುಮಹಡಿ ಕಟ್ಟಡಗಳು, ವಿಮಾನಗಳ ಹಾರಟ, ಮತ್ತು ಇತರ ವೈಭೋಗಕ್ಕೆ ಸಂಬಂದಪಟ್ಟ ವಸ್ತುಗಳ ಉತ್ಪಾದನೆಯನ್ನು ನಾವು ಅಭಿವೃದ್ಧಿಯೆಂದು ಕರೆಯಲಾಗದು. ಬಡವರಿಗೆ ನಮ್ಮ ದೇಶದ ಸಂಪನ್ಮೂಲಗಳ ಮೇಲೆ ಪ್ರಥಮ ಆದ್ಯತೆ ಮತ್ತು ಹಕ್ಕನ್ನು ದೊರಕಿಸಿಕೊಟ್ಟು ಅವರ ಸಹ ಭಾಗಿತ್ವದೊಂದಿಗೆ ಜೀವನ ಮಟ್ಟದಲ್ಲಿ ಸಕರಾತ್ಮಕ ಬದಲಾವಣೆ ತರುವುದನ್ನು ಅಭಿವೃದ್ಧಿಯೆಂದು ಪರಿಗಣಿಸಬಹುದು.

**ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಕಾಯ್ದಿರಿಸಿಕೊಳ್ಳುವುದು:**

ನೋಬೆಲ್ ಪಾರಿತೋಷಕ ವಿಜೇತರಾದ ಅಮರ್ತ್ಯ ಸೇನ್‌ರವರು ಸ್ವಾತಂತ್ರ್ಯವನ್ನು ಅಭಿವೃದ್ಧಿ ಎಂದು ಕರೆಯುತ್ತಾರೆ. ಅಂದರೆ ಯಾವ ಪ್ರಕ್ರಿಯೆಯಿಂದ ನಮ್ಮ ಸ್ವಾತಂತ್ರ್ಯ ಇಮ್ಮಡಿಗೊಳ್ಳುತ್ತದೆಯೋ, ಯಾವ ಕ್ರಿಯೆಯಿಂದ ಮಕ್ಕಳ, ಮಹಿಳೆಯರ, ಆರ್ಥಿಕವಾಗಿ ಹಿಂದುಳಿದವರ ಜೀವನ ಸುಧಾರಿಸಬಲ್ಲದೋ ಅದನ್ನು ನಿಜವಾದ ಅಭಿವೃದ್ಧಿಯೆನ್ನಬಹುದು. ನಮ್ಮ ಆರೋಗ್ಯ, ನೈರ್ಮಲ್ಯ, ಆಹಾರ, ವಸತಿ ಮತ್ತು ಶಿಕ್ಷಣ ಮಟ್ಟದಲ್ಲಿ ಸುಧಾರಣೆತರುವ ಎಲ್ಲಾ ಆರ್ಥಿಕ ಮತ್ತು ರಾಜಕೀಯ ಪ್ರಯತ್ನಗಳು ಸಹ ಅಭಿವೃದ್ಧಿಯ ಪಟ್ಟಿಗೆ ಸೇರಿಕೊಳ್ಳುತ್ತವೆ.

**ಮೂಲ ಭೂತ ಹಕ್ಕುಗಳ ಪೂರೈಕೆ:** ಅಭಿವೃದ್ಧಿಯೆಂದರೆ ಜನರ ದೈನಂದಿನ ಬದುಕಿಗೆ ಬೇಕಾಗುವ ಮೂಲ ಅವಶ್ಯಕತೆಗಳನ್ನು ಪೂರೈಸುವುದು. ವಸತಿ, ನೈರ್ಮಲ್ಯ, ರಸ್ತೆ, ಸಾರಿಗೆ ವ್ಯವಸ್ಥೆ, ಪೌಷ್ಟಿಕ ಆಹಾರ, ಶಿಕ್ಷಣ, ಬಟ್ಟೆ, ಗುಣಮಟ್ಟದ ನೀರು ಮತ್ತು ಗಾಳಿ, ಘನತೆಯ ಉದ್ಯೋಗ ಇತ್ಯಾದಿಗಳನ್ನು ಜನರಿಗೆ ತಲುಪಿಸಬೇಕಾಗುತ್ತದೆ ಇವನ್ನೇ ನಿಜವಾದ ಸ್ವಾತಂತ್ರ್ಯದ ಕುರುಹುಗಳೆನ್ನಬಹುದು. ಇವುಗಳನ್ನು ಪೂರೈಸುವುದು ತಳಮಟ್ಟದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯ ಕರ್ತವ್ಯ ಮತ್ತು ಪಡೆದುಕೊಳ್ಳುವುದು ಜನರ ಹಕ್ಕು. ಗ್ರಾಮೀಣ ಮಟ್ಟದಲ್ಲಿ ಪ್ರತಿ ಮನೆಗೆ ಶೌಚಾಲಯ, ಬೀದಿ ದೀಪ, ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಅಂಗನವಾಡಿ, ಶಾಲೆ, ಆಸ್ಪತ್ರೆ ಇತ್ಯಾದಿಗಳು ಕಡ್ಡಾಯವಾಗಿ ಇರಬೇಕಾಗಿರುತ್ತದೆ. ವಿಶೇಷವಾಗಿ ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ನ್ಯಾಯದ ಹಕ್ಕನ್ನು ಗೌರವಿಸಿ ಅದಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವುದು.

**ಪ್ರಕೃತಿ ಸಂಪನ್ಮೂಲಗಳ ಮೇಲೆ ಜನರ ಒಡೆತನ ಮತ್ತು ಸುಸ್ಥಿರ ಬಳಕೆ:** ಜನರಿಗೆ ಮೂಲಭೂತ ಸೌಲಭ್ಯವನ್ನು ಒದಗಿಸ ಬೇಕಾದರೆ ಪ್ರಾಕೃತಿಕ ಸಂಪನ್ಮೂಲಗಳ ಬಳಕೆ ಅಗತ್ಯವಿದೆ. ಆದರೆ, ಖಾಸಗೀಕರಣದ ಮೂಲಕ ಜಲ, ನೆಲ ಮತ್ತು ಖನಿಜ ಸಂಪತ್ತನ್ನು ಲೂಟಿ ಮಾಡಿಸಿ ಅದನ್ನೇ ಜನರ ಹಣದಲ್ಲಿ ಖರೀದಿಸಿ ಮೂಲ ಅಗತ್ಯಗಳನ್ನು ಪೂರೈಸಲು ಹೊರಟರೆ ಅದು ಭ್ರಷ್ಟಾಚಾರವೇ ಹೊರತು ಮತ್ತೊಂದಲ್ಲ. ಹತೋಟಿಯಿಲ್ಲದ ಅಭಿವೃದ್ಧಿ ಕಾಮಗಾರಿಗಳಿಂದಾಗಿ ಪರಿಸರದ ಮೇಲೆ ಮಾರಕವಾದ ಪ್ರಭಾವ ಉಂಟಾಗುತ್ತಿದೆ. ಕೇರಳ ರಾಜ್ಯದ ಕಾರ್ಖಾನೆಗಳಿಗೆ ವಿದ್ಯುತ್‌ಸಂಪರ್ಕ ನೀಡಲು ನಾಗರಹೊಳೆ ಅರಣ್ಯದಲ್ಲಿನ ಸುಮಾರು 50 ಸಾವಿರ ಮರಗಳನ್ನು ಕಡಿಯಲಾಗುತ್ತಿದೆ. ಇದರಿಂದಾಗಿ ಈ ಅರಣ್ಯದ ವೈವಿಧ್ಯಮಯ ಜೀವ ಸಂಕುಲ ಸರಪಳಿ ಕಡಿದು ಹೋಗಲಿದ್ದು, ಮಣ್ಣಿನ ಸವಕಳಿ ಹೆಚ್ಚಾಗಲಿದೆ.

**ಉತ್ತಮ ಆಳ್ವಿಕೆಯನ್ನು ರೂಢೀಗತ ಮಾಡಿಕೊಳ್ಳುವುದು:**

ಅಭಿವೃದ್ಧಿಯ ಅಂತಿಮ ಉದ್ದೇಶ ಸಮಾಜದ ಸರ್ವೋತೋಮುಖ ಬೆಳವಣಿಗೆ. ಇದನ್ನು ಸಾಧಿಸಬೇಕಾದರೆ ಸಮಾನತೆ, ಪಾರದರ್ಶಕತೆ, ಉತ್ತರದಾಯಿತ್ವ, ಕಾನೂನು ಪಾಲನೆ, ಜನರ ಸಹಭಾಗಿತ್ವವನ್ನು ಪ್ರೋತ್ಸಹಿಸಬೇಕು. ಯಾವುದೇ ಅಭಿವೃದ್ಧಿಯು ಈ ಕೆಳಗಿನ ಗುಣ ಲಕ್ಷಣಗಳನ್ನು ಹೊಂದಿರಬೇಕು

- ಜನರ ಭಾಗವಹಿಸುವಿಕೆ ಮತ್ತು ಪಾಲುದಾರಿಕೆ ಇರಬೇಕು
- ಅಭಿಮತ–ಇಡೀ ಸಮುದಾಯದ ಒಳಿತಿಗಾಗಿ ಒಮ್ಮತವಿರಬೇಕು
- ಸಮಂಜಸ–ಜನರ ಪರಿಸ್ಥಿತಿಗೆ, ಅವರ ಅಗತ್ಯಗಳಿಗೆ ಮತ್ತು ಬದುಕಿಗೆ ಹೊಂದುವಂತಿರಬೇಕು
- ಪರಿಣಾಮಕಾರಿ ಮತ್ತು ದಕ್ಷತೆ– ಹಾಕಿಕೊಳ್ಳುವ ಕಾರ್ಯತಂತ್ರಗಳು, ಸಂಪನ್ಮೂಲಗಳು ಉತ್ತಮ ಫಲಿತಾಂಶವನ್ನು ನೀಡುವಂತಿರಬೇಕು
- ಮೌಲ್ಯಾಧಾರಿತ ಪ್ರಕ್ರಿಯೆ – ಸಹಕಾರ ಮನೋಭಾವ, ಪ್ರಾಮಾಣಿಕತೆ, ಕಾಳಜಿ, ವಿನಮ್ರತೆ, ಸೇವಾ ಮನೋಭಾವಗಳು ಇರಬೇಕು.

ಮುಂದುವರೆಯುವುದು. . .

# ಹಾಳಾಗದಿರಲಿ ಅನ್ನ, ರೈತ ಬಾಳಾಗಲಿ ಚೆನ್ನ

ಜಿ. ಯಂ. ವರ್ಗೀಸ್
ಕ್ರಾಸ್ ಸಂಸ್ಥೆ

ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಪ್ರಕಾರ, ವಿಶ್ವದಲ್ಲಿ ಪ್ರತಿ ವರ್ಷ 1.30 ಕೋಟಿ ಟನ್ ಆಹಾರೋತ್ಪನ್ನಗಳು ಪೋಲಾಗುತ್ತಿವೆ. ಅದಕ್ಕೆ ಕಾರಣ ಹುಡುಕುತ್ತಾ ಹೊರಟರೆ – ಆಡಳಿತ ನಡೆಸುತ್ತಿರುವವರ ದಿವ್ಯ ನಿರ್ಲಕ್ಷ್ಯವೇ? ಹಸಿದವನ ಹಸಿವಿನ ಅರಿವಿನ ಕೊರತೆಯೇ ಅಥವಾ ಆಡಳಿತಶಾಹಿಯ ದೂರದೃಷ್ಟಿಯ ಕೊರತೆಯೇ ಹೀಗೆ ಅನೇಕ ಕಾರಣಗಳು ಹಾಗೂ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ.

ಒಂದೆಡೆ ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿರುವ ಒಂದು ಕಟು ಸತ್ಯ ಏನೆಂದರೆ, ಆಹಾರಧಾನ್ಯಗಳ ಬೆಲೆ ದಿನೇ ದಿನೇ ಏರುತ್ತಾ ಜನಸಾಮಾನ್ಯರು ಹಣದುಬ್ಬರದಡಿ ಸಿಲುಕಿ ಬದುಕಲು ಹೋರಾಡುವ ಸ್ಥಿತಿ ನಿರ್ಮಾಣವಾಗಿದೆ. ಇನ್ನೊಂದೆಡೆ ನೂರಾರು ಕೋಟಿ ಟನ್ ಆಹಾರ ಧಾನ್ಯಗಳು ಯಾರಿಗೂ ಸಿಗದೆ ದಾಸ್ತಾನು ಮಳಿಗೆಗಳಲ್ಲಿ ಕೊಳೆತು ವ್ಯರ್ಥವಾಗುತ್ತಿವೆ. ಕಾಳಸಂತೆಕೋರರು ಆಹಾರ ಧಾನ್ಯಗಳನ್ನು ಅವಿತಿಟ್ಟು ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನಾವು ಸಮರ್ಪಕವಾಗಿ ನಿಭಾಯಿಸಿದರೆ ಭಾರತದಲ್ಲಿರುವ 8.42 ಕೋಟಿ ಜನರು ಒಪ್ಪೊತ್ತಿನ ಊಟಕ್ಕೂ ಗತಿ ಇಲ್ಲದ, ಅಸ್ಥಿಪಂಜರವಾಗುತ್ತಿರುವವರ ಹೊಟ್ಟೆ ತುಂಬಿಸಬಹುದಾಗುತ್ತಿತ್ತು.

ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಪ್ರಕಾರ, ವಿಶ್ವದಲ್ಲಿ ಸುಮಾರು 100 ಕೋಟಿಗಿಂತ ಅಧಿಕ ಜನ ಹಸಿವಿನಿಂದ ಬಳಲುತ್ತಿದ್ದಾರೆ. ನಾವು ಉತ್ಪಾದಿಸುತ್ತಿರುವ ಒಟ್ಟು ಆಹಾರದಲ್ಲಿ ಮೂರನೇ ಒಂದು ಪಾಲು ಯಾರಿಗೂ ಸಿಗದೇ ದಾಸ್ತಾನುಮಳಿಗೆಗಳಲ್ಲಿ ಮತ್ತು ಇತರೇ ಮೂಲಗಳಿಂದ ವ್ಯರ್ಥವಾಗುತ್ತಿದೆ. ಒಂದು ಅಂದಾಜಿನಂತೆ ನಮ್ಮ ಭಾರತ ದೇಶದಲ್ಲಿ ಸುಮಾರು ಏಳು ಸಾವಿರ ಕೋಟಿ ರೂ ಮೌಲ್ಯದ ಆಹಾರಧಾನ್ಯ ಕೊಳೆಯುತ್ತಿದೆ. ಇದಕ್ಕೆ ಕಾರಣವನ್ನು ನಾವು ಹುಡುಕಿದರೆ, ಸಕಾಲಕ್ಕೆ ಸಾರಿಗೆ ಸೌಲಭ್ಯದ ಕೊರತೆ, ಶೀತಲೀಕರಣದ ವ್ಯವಸ್ಥೆ ಇಲ್ಲದಿರುವುದು ಮತ್ತು ಸಂವಹನ ಕೊರತೆಯಿಂದ ರೈತ ಬೆಳೆದ ಆಹಾರ ಧಾನ್ಯಗಳು ನಿರ್ದಿಷ್ಟ ಸಮಯದಲ್ಲಿ ಮಾರುಕಟ್ಟೆಗೆ ತಲಪದೆ ಕೊಳೆತು ಹೋಗಿರುತ್ತವೆ. ಆದರಿಂದಾಗಿ, ಒಂದೆಡೆ ಬೆಳೆ ಬೆಳೆದ ರೈತ ತನ್ನ ಆದಾಯವನ್ನು ಕಳೆದುಕೊಂಡು ಸಾಲದಲ್ಲೇ ಜೀವನ ಸಾಗಿಸುವ ಸ್ಥಿತಿಯಾದರೆ, ಮತ್ತೊಂದೆಡೆ ಆಹಾರ ಪೂರೈಕೆಯ ಕೊರತೆಯಿಂದ ದರ ಏರಿಕೆ ಉಂಟಾಗಿ ಶ್ರೀ ಸಾಮಾನ್ಯರು ಪರದಾಡುವಂತಾಗಿದೆ.

ನಮ್ಮ ಸಮಾಜದಲ್ಲಿ, ಆಹಾರ ವಸ್ತುಗಳ ಮೌಲ್ಯದ ಅರಿವಿಲ್ಲದೆ, ಸಭೆ ಸಮಾರಂಭಗಳಲ್ಲಿ ಜನ ಭರ್ಜರಿ ಭೋಜನವನ್ನು ಅರ್ಥಂಬರ್ಧ ತಿಂದು ತಿಪ್ಪೇಗುಂಡಿಗೆ ಅಥವಾ ಕಸದ ತೊಟ್ಟಿಗೆ ಎಸೆಯುವ ಆಹಾರದ ಪ್ರಮಾಣವು ಕಡಿಮೆ ಏನಲ್ಲ. ಇದು ಕೊಳೆತು ರೋಗ ಹರಡಿ ಅನೇಕ ಜನರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದರ ಪ್ರಮಾಣ ಬೆಂಗಳೂರಿನಂತಹ ಪಟ್ಟಣಗಳಲ್ಲಿ ಹೆಚ್ಚಾಗುತ್ತಿದೆ. ಒಂದು ಕಾಲದಲ್ಲಿ "ಉದ್ಯಾನಗಳ ನಗರಿ" ಎಂದೇ ಕರೆಯಲಾಗುತ್ತಿದ್ದ ನಮ್ಮ ಚೆಲುವ ಕನ್ನಡ ರಾಜ್ಯದ ರಾಜಧಾನಿ ಬೆಂಗಳೂರು, ಇಂದು ಕೊಳೆ ಮತ್ತು ಗಬ್ಬು ವಾಸನೆಯ ತಿಪ್ಪೇ ಗುಂಡಿಗಳ ಬೀಡಾಗಿದೆ. ಇದನ್ನು ಪೌರ ಕಾರ್ಮಿಕರ ಬೇಜವಾಬ್ದಾರಿ ಮತ್ತು ಕೆಲಸದ ಕುರಿತ ಅವರ ಅಸಡ್ಡೆತನದ ಪರಮಾವಧಿ ಎಂದು ಹೇಳಬಹುದೇ? ಈ ದಿವ್ಯ ನಿರ್ಲಕ್ಷ್ಯಕ್ಕೆ ಮಹಾನಗರ ಪಾಲಿಕೆಯ ಜನ ಪ್ರತಿನಿಧಿಗಳನ್ನು ಹೊಣೆಗಾರರನ್ನಾಗಿಸಬಹುದೇ?ಈ ನಿಟ್ಟಿನಲ್ಲಿ ಅವರ ಕೊಡುಗೆ ಏನು?

ಬೆಂಗಳೂರಿನ ಕಲ್ಯಾಣಮಂಟಪಗಳಲ್ಲಿ ಪ್ರತಿವರ್ಷ ಸುಮಾರು 339 ಕೋಟಿ ರೂ ಮೌಲ್ಯದ ಮದುವೆ ಆಹಾರ ಪದಾರ್ಥಗಳು ಹಾಳುಮಾಡಿ ತಿಪ್ಪೇಗುಂಡಿಗಳಿಗೆ ಎಸೆಯಲಾಗುತ್ತಿದೆ. ಇಡೀ ದೇಶದಲ್ಲಿ ಈ ಪ್ರಮಾಣ ಸುಮಾರು 10,000 ಕೋಟಿ ರೂ ಎಂದು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವ ವಿದ್ಯಾಲಯದ ಅಧ್ಯಾಪಕರ ತಂಡದ ಸಮೀಕ್ಷಾ ವರದಿ ಹೇಳುತ್ತದೆ. ಇಷ್ಟು ಆಹಾರವನ್ನು ನಾವು ಉಳಿಸುತ್ತಿದ್ದರೆ ಎಷ್ಟು ಮಂದಿ ಹಸಿದವರ ಹಸಿವನ್ನು ನೀಗಿಸಬಹುದಿತ್ತು ಅಲ್ಲವೇ ಎಷ್ಟು ಮಕ್ಕಳನ್ನು ಅಪೌಷ್ಟಿಕತೆಯಿಂದ ರಕ್ಷಿಸಬಹುದಿತ್ತು. ಇದು ಉಳ್ಳವರು ನಿರ್ಗತಿಕರ, ಬದಿಗೆ ಸರಿಸಲ್ಪಟ್ಟವರ ಮತ್ತು ಒಪ್ಪತ್ತೂ ಊಟ ಮಾಡದೆ ಮಲಗುವವರ ಕುರಿತಾಗಿನ ತಮ್ಮ ಪ್ರತಿಬದ್ಧತೆಯ ಆತ್ಮ ಸಾಕ್ಷಿ ಪ್ರಶ್ನೆಯೇ?

ಮನೆಮನೆಯಲ್ಲೂ ವ್ಯವಸ್ಥಿತ ನಿರ್ವಹಣೆಯ ಕೊರತೆಯಿಂದಾಗಿ ಹಣ್ಣು ಮತ್ತು ತರಕಾರಿಗಳು ಕೊಳೆತು ಕಸದ ರಾಶಿಗೆ ಸೇರುತ್ತಿವೆ. ಬೆಂಗಳೂರು ನಗರದಲ್ಲಿ ಹಣ ಪಾವತಿಸಿ ವಾಸಿಸುವ ಅತಿಥಿ ಗೃಹಗಳ ಹಾವಳಿ ಹೆಚ್ಚುತ್ತಿವೆ. ನಗರದ ಅಶುಚಿತ್ವಕ್ಕೆ ಇವರ ಕೊಡುಗೆ ಏನೂ ಕಡಿಮೆ ಇಲ್ಲ. ದರ ಏರಿಕೆಯ ಇತ್ತೀಚಿನ ಈ ದಿನಗಳಲ್ಲಿ ಆಹಾರ ಪದಾರ್ಥಗಳು ನಶಿಸಿ ಹೋಗದಂತೆ ಕಾಪಾಡಿ ಸಂರಕ್ಷಿಸುವುದು ಈಗ ಹಿಂದೆಂದಿಗಿಂತಲೂ ಬಹು ಅಗತ್ಯವಾಗಿದೆ. ಸ್ಥಳೀಯ ಮಟ್ಟದಲ್ಲಿ ರೈತರು ಬೆಳೆದ ಆಹಾರೋತ್ಪನ್ನವನ್ನು ಕೆಡದಂತೆ ಶೈತ್ಯಾಗಾರಗಳ ಪೂರೈಕೆ ಮಾಡಿದರೆ ಹೆಚ್ಚಿನ ಪ್ರಮಾಣದಲ್ಲಿ ಇವುಗಳನ್ನು ನಾವು ಸಂರಕ್ಷಿಸಬಹುದು. ಮನೆ ಮನೆಯಲ್ಲಿ ಉಳಿಸಿದ ಆಹಾರ ಇಡೀ ದೇಶಕ್ಕೆ ಆಹಾರ ಕೊರತೆಯನ್ನು ನೀಗಿಸುವಲ್ಲಿ ಗಣನೀಯ ಕೊಡುಗೆಯನ್ನಾಗಿಸುತ್ತವೆ. ಈ ನಿಟ್ಟಿನಲ್ಲಿ ಅರಿವಿನ ಆಂದೋಲನ ಪರಿಣಾಮಕಾರಿಯಾಗಿ ನಡೆದರೆ ಬೆಲೆ ಏರಿಕೆಯ ಪ್ರಸ್ತುತ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಬಹುದು.

ಹಸಿದ ಹೊಟ್ಟೆಗೆ ಅನ್ನ, ನೆಮ್ಮದಿಯ ಜೀವನಕ್ಕೆ ಆರೋಗ್ಯ, ವಾಸಕ್ಕೊಂದು ಸೂರು, ಸ್ವಾವಲಂಬಿ ಬದುಕಿಗಾಗಿ ಶಿಕ್ಷಣ, ದುಡಿಯುವ ಕೈಗಳಿಗೆ ಉದ್ಯೋಗ, ಶ್ರಮಕ್ಕೆ ತಕ್ಕ ಫಲ, ಅಸಹಾಯಕರಿಗೆ ರಕ್ಷಣೆ ಇವು ಜವಾಬ್ದಾರಿಯುತ ಸರ್ಕಾರದ ಆದ್ಯತೆಗಳಾಗಬೇಕು ಎಂಬುದನ್ನು ನಾವು ದೃಢವಾಗಿ ಪ್ರತಿಪಾದಿಸಬೇಕಿದೆ.

ರಾಜಕೀಯ ಭದ್ರತೆ, ಕೌಶಲ್ಯಪೂರಿತ ಮಾನವ ಸಂಪನ್ಮೂಲ, ಮೂಲ ಸೌಕರ್ಯಗಳ ಸುಧಾರಣೆ, ದಕ್ಷ ಆಡಳಿತ ವ್ಯವಸ್ಥೆ, ಕೃಷಿಕರ ಕಲ್ಯಾಣ ಇವುಗಳು ಸರ್ಕಾರದ ಪ್ರಥಮ ಆದ್ಯತೆ ಆಗಬೇಕು. ಅಂತೆಯೇ ರೈತರ ಬೆಳೆಗಳಿಗೆ ಯೋಗ್ಯ ಬೆಲೆ ನಿಗದಿಪಡಿಸಲು ಕೃಷಿ ಬೆಲೆ ಆಯೋಗ ರಚಿಸಿ ಕಾರ್ಯೋನ್ಮುಖವಾಗಬೇಕು. ಕೃಷಿ ಬದುಕನ್ನು ಗೌರವಯುತಗೊಳಿಸಿ ರೈತ ಸಮುದಾಯದಲ್ಲಿ ಆತ್ಮವಿಶ್ವಾಸ ಮೂಡಿಸುವ ಸಕಲ ಕ್ರಮಗಳನ್ನು ಕೈಗೊಳ್ಳಬೇಕು. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಪ್ರಜೆಗಳ ವಿಶ್ವಾಸವೇ ಚುನಾಯಿತ ಸರ್ಕಾರದ ಪ್ರಾಣವಾಯುವಾಗಬೇಕು. ಅದನ್ನು ಉಳಿಸಿಕೊಳ್ಳಲು ಚುನಾಯಿತ ಸರಕಾರ ಜನರಿಗೆ ಚುನಾವಣಾ ಪೂರ್ವ ನೀಡಿದ ಭರವಸೆಯನ್ನು ನಿಗದಿತ ಅವಧಿಯಲ್ಲಿ ಪೂರೈಸಿ ನುಡಿದಂತೆ ನಡೆದು, ಸ್ವಚ್ಛ, ಸುಭದ್ರ ಹಾಗೂ ಪಾರದರ್ಶಕ ಆಡಳಿತ ನೀಡಬೇಕು. ಜನರ ಆಸೆ ಆಕಾಂಕ್ಷೆಗಳು ಗಗನ ಕುಸುಮವಾಗದಂತೆ ಚುನಾಯಿತ ಸರಕಾರ ಸ್ಪಂದಿಸಬೇಕು. ಜನರು ಆಡಳಿತ ನಡೆಸುತ್ತಿರುವ ಸರಕಾರವನ್ನು "ಇದು ನಮ್ಮ ಸರ್ಕಾರ" ಎಂದು ಎದೆತಟ್ಟಿ ಹೇಳಬೇಕು.

**ಜಾಗತಿಕ ಹಸಿವಿನ ಮಟ್ಟವನ್ನು ತಗ್ಗಿಸಲು ಸರಕಾರೇತರ ಸಂಸ್ಥೆಗಳ ಪ್ರಯತ್ನ**

"ವಿಶ್ವ ಒಂದು ಕುಟುಂಬ, ಸರ್ವರಿಗೂ ಆಹಾರ" ಎಂಬ ಘೋಷಣೆಯೊಂದಿಗೆ ಸರಕಾರೇತರ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಹಸಿವಿನ ವಿರುದ್ಧ ಆಂದೋಲನ ವಿಶ್ವದಾದ್ಯಂತ ಹಮ್ಮಿಕೊಂಡಿದೆ. ಈ ವಿಶ್ವದಲ್ಲಿ ಎಲ್ಲರಿಗೂ ಸಾಕಾಗುವಷ್ಟು ಆಹಾರ ಲಭ್ಯವಾಗುವಷ್ಟು ಸಂಪನ್ಮೂಲಗಳಿದ್ದರೂ ಸುಮಾರು 100 ಕೋಟಿ ಜನರು ಹಸಿವಿನಿಂದ ಜೀವಿಸಬೇಕಾಗಿದೆ. ಇದು ವಿಶ್ವ ಈ ಜನರಿಗೆ ಬಗೆದ ಅತೀ ದೊಡ್ಡ ಅಪರಾಧ ಹಾಗೂ ವಂಚನೆಯಾಗಿದೆ. ಕಾರಿತಾಸ್ ಇಂಡಿಯಾ, ಕ್ರಾಸ್ ಸಂಸ್ಥೆ, ಬೆಂಗಳೂರು ಹಾಗೂ ಧರ್ಮಕ್ಷೇತ್ರಗಳ ಸಮಾಜ ಸೇವಾ ಸಂಸ್ಥೆಗಳು ಬಲವಾಗಿ ಪ್ರತಿಪಾದಿಸುವುದೇನೆಂದರೆ ಆಯಾ ದೇಶದ ಸರಕಾರ ತನ್ನ ಎಲ್ಲಾ ನಾಗರಿಕರಿಗೂ ಸಾಕಷ್ಟು ಆಹಾರ ಸಿಗಲು ಖಾತರಿ ವಹಿಸಬೇಕು. ಇದಕ್ಕಾಗಿ ಶಾಸನಗಳನ್ನು ರೂಪಿಸಬೇಕು. ಈ ನಿಟ್ಟಿನಲ್ಲಿ ಕಾರಿತಾಸ್ ಇಂಟರ್ನ್ಯಾಷನಲ್ ಸಂಸ್ಥೆಯೊಂದಿಗೆ ಅದರ ಪ್ರಥಮ ಜಾಗತಿಕ ಮಟ್ಟದ ಆಂದೋಲನಕ್ಕೆ ಕೈ ಜೋಡಿಸಲು ಸುಮಾರು 160 ದೇಶಗಳು ಒಪ್ಪಿವೆ. ಈ ಆಂದೋಲನದ ಮೂಲಕ 2025 ರ ವೇಳೆಗೆ ಜಾಗತಿಕ ಮಟ್ಟದಲ್ಲಿ ಹಸಿವನ್ನು ಸಂಪೂರ್ಣವಾಗಿ ನೀಗಿಸುವುದಾಗಿದೆ. ಆಹಾರದ ಹಕ್ಕು ಮಾನವ ಹಕ್ಕೆಂದು ಜಾಗತಿಕ ಮಟ್ಟದಲ್ಲಿ ಘೋಷಣೆಯಾಗಿದೆ. ಆದರೆ ಎಂದಿಗೆ ಮುಗಿಯುವುದೋ ಈ ಹಸಿವಿನ ಗೋಳು ಎಂಬುದು ನಮ್ಮ ಕಳಕಳಿಯಾಗಿದೆ.

(ಅಂಕಿ ಅಂಶಗಳು, ಕೃಪೆ: ವಿಜಯ ಕರ್ನಾಟಕ ದಿನಾಂಕ 7/7/2014)

# ಸರಕಾರದ ಸವಲತ್ತುಗಳು - ನಮ್ಮ ಹಕ್ಕು

## ಬಿದಾಯಿ ಯೋಜನೆ

ಜಿ. ಎಂ. ವರ್ಗೀಸ್
ಕ್ರಾಸ್ ಸಂಸ್ಥೆ

ಕರ್ನಾಟಕ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ್ ಮತ್ತು ಪಾರ್ಸಿ ಸಮುದಾಯದ ಹೆಣ್ಣು ಮಕ್ಕಳಿಗೆ / ವಿಚ್ಛೇದಿತ ಮಹಿಳೆ, ವಿಧವೆಯರಿಗೆ ವೈಯಕ್ತಿಕ ಹಾಗೂ ಸಾಮೂಹಿಕ ಮದುವೆ ಕಾರ್ಯಗಳಿಗೆ ಸಹಾಯಧನ.

ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 78 ಡಬ್ಲ್ಯೂಇಎಸ್ 2013 ದಿನಾಂಕ: 04.09.2013ರ ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರ ಕುಟುಂಬದ ಹೆಣ್ಣು ಮಕ್ಕಳಿಗೆ, ವಿಚ್ಛೇದಿತ ಮಹಿಳೆಯರಿಗೆ ಹಾಗೂ ವಿಧವೆಯರಿಗೆ ಮದುವೆಯ ನಿಮಿತ್ತ ವಿವಾಹದ ಖರ್ಚು ವೆಚ್ಚಗಳು, ಜೀವನಾವಶ್ಯಕ ಸಾಮಗ್ರಿಗಳು ಅಥವಾ ನಗದು ಮತ್ತು ಸಾಮಗ್ರಿಗಳನ್ನು ನೀಡಲು ರೂ. 50,000/-ಗಳ ಸಹಾಯಧನ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲಾಗುತ್ತದೆ.

**ಅರ್ಹತೆಗೆ ಮಾನದಂಡಗಳು:**

1. ಈ ಯೋಜನೆಯಡಿಯಲ್ಲಿ ಧನಸಹಾಯ ಪಡೆಯುವ ಹೆಣ್ಣುಮಕ್ಕಳು, ವಿಚ್ಛೇದಿತ ಮಹಿಳೆಯರು ಅಥವಾ ವಿಧವೆಯರ ಕುಟುಂಬದ ವಾರ್ಷಿಕ ವರಮಾನ ರೂ. 1,50,000/- ಲಕ್ಷಕ್ಕಿಂತ ಕಡಿಮೆ ಇರತಕ್ಕದ್ದು.
2. ಈ ಸೌಲಭ್ಯ ಜೀವನದಲ್ಲಿ ಒಮ್ಮೆ ಮಾತ್ರ ಪಡೆಯಬಹುದಾಗಿದೆ.
3. ಈ ಸೌಲಭ್ಯ ಪಡೆಯುವ ವಧುವಿಗೆ ಮದುವೆಯ ದಿನಾಂಕಕ್ಕೆ 18 ವರ್ಷ ವಯಸ್ಸು ಹಾಗೂ ವರನಿಗೆ 21 ವರ್ಷ ವಯಸ್ಸು ಆಗಿರತಕ್ಕದ್ದು.
4. ರಾಜ್ಯದಲ್ಲಿ ಕನಿಷ್ಠ 3 ವರ್ಷದವರೆಗೆ ವಧು ವಾಸವಾಗಿರುವ ಬಗ್ಗೆ ದೃಢೀಕೃತ ದಾಖಲಾತಿ ಪಡೆಯುವುದು.
5. ಮದುವೆ ನಿಶ್ಚಯವಾಗಿರುವ ಬಗ್ಗೆ ಲಗ್ನ ಪತ್ರಿಕೆ (ಮಾಡಿಸಿದ್ದಲ್ಲಿ) ಮತ್ತು ಇತರೆ ದಾಖಲಾತಿಗಳೊಂದಿಗೆ ಪ್ರಸ್ತಾವನೆಪಡೆದು ಫಲಾನುಭವಿಯ ಕೋರಿಕೆಯ ಮೇರೆಗೆ ಮದುವೆಯ ದಿನಾಂಕದಂದು ರೂ. 50,000/-ದ ವಧುವಿನ ಹೆಸರಿಗಿರುವ ಚೆಕ್ಕು ಆನ್‌ಲೈನ್ ಮೂಲಕ ರೂ. 50,000/-ನೀಡಲಾಗುವುದು.
6. ಮದುವೆಯಾದ ನಂತರ ವಧು-ವರನ ಭಾವಚಿತ್ರ, ಧಾರ್ಮಿಕ ಸಂಸ್ಥೆ ನೀಡಿರುವ ಮದುವೆ ಪ್ರಮಾಣ ಪತ್ರ ಅಥವಾ ಉಪ ನೋಂದಣಾಧಿಕಾರಿಗಳು ನೀಡಿರುವ ಮದುವೆ ನೋಂದಣಿ ಪತ್ರ ಪಡೆಯುವುದು.
7. ಮೇಲಿನ ಷರತ್ತುಗಳಲ್ಲಿರುವ ದಾಖಲಾತಿಗಳನ್ನು ಮದುವೆಯ ತರುವಾಯ ನೀಡಲಾಗುವುದೆಂದು ಪೂರ್ವಭಾವಿಯಾಗಿ ಘೋಷಣಾ ಪತ್ರವನ್ನು ಪಡೆಯತಕ್ಕದ್ದು.
8. ಈ ಯೋಜನೆಯ ಲಾಭ ವೈಯಕ್ತಿಕ ಹಾಗೂ ಸಾಮೂಹಿಕವಾಗಿ ನೆರವೇರಿಸಲಾಗುವ ವಿವಾಹಗಳಿಗೂ ಅನ್ವಯಿಸುವುದು.
9. ಸ್ಥಳೀಯ ಸರ್ಕಾರೇತರ ಸಂಸ್ಥೆಗಳು ಈ ಯೋಜನೆಯಡಿಯಲ್ಲಿ ನಿಗಧಿಪಡಿಸಲಾಗಿರುವ ದಾಖಲಾತಿಗಳನ್ನು ನೀಡಿ ಅರ್ಹ ಫಲಾನುಭವಿಗಳಿಗೆ ನಗದು ನೀಡಿದ್ದಲ್ಲಿ ಅಕೌಂಟ್ ಪೇಯಿ ಚೆಕ್ಕಿನ ಮೂಲಕ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯಬಹುದು.
10. ಅರ್ಜಿದಾರರು ಸಹಾಯಧನ ಮಂಜೂರಾತಿಗೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಯು ನಿಗಧಿತ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲಾತಿಗಳು ಮದುವೆ ನಡೆಯುವ ದಿನಾಂಕದಿಂದ ಒಂದು ತಿಂಗಳ ಮುಂಚೆ ಸಲ್ಲಿಸತಕ್ಕದ್ದು.
11. ಜಿಲ್ಲಾ ಅಧಿಕಾರಿ ಅಲ್ಪಸಂಖ್ಯಾತರ ಇಲಾಖೆಯವರು ಪರಿಶೀಲನೆ ನಂತರ ಜಿಲ್ಲೆಗೆ ನಿಗಧಿಪಡಿಸಲಾಗಿರುವ ಗುರಿಗೆ ತಕ್ಕಂತೆ ಹಾಗೂ ಅತೀ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳಿಗೆ ಮೊದಲ ಆದ್ಯತೆ ಮೇರೆಗೆ ಸಹಾಯಧನ ಅಥವಾ ಸಾಮಾಗ್ರಿ ಇತ್ಯಾದಿ ಒದಗಿಸಲಾಗುತ್ತದೆ.
12. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಪ್ರತಿ ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಜನಸಂಖ್ಯೆಯ ಆಧಾರದ ಮೇಲೆ ಗುರಿ ನಿಗಧಿಪಡಿಸಿ ಪ್ರತಿ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.

ವಿ.ಸೂ: ಈ ಯೋಜನೆಯನ್ನು ಪಡೆಯಲಿಚ್ಛಿಸುವವರು ನಿಗದಿತ ಅರ್ಜಿ ನಮೂನೆ "ಬಿದಾಯಿ ಅರ್ಜಿ " ಭರ್ತಿ ಮಾಡಿ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಸಲ್ಲಿಸಬಹುದಾಗಿದೆ

> Quote:
> A way has to be found to enable everyone to benefit from the fruits of the earth, and not simply to close the gap between the affluent and those who must be satisfied with the crumbs falling from the table." - Pope Francis

**ಪಟಾಕಿ**

**ಅತ್ತೆ** : ನಾನು ಮಂಚದ ಮೇಲೆ ಕೂತ್ರೆ ನೀನೇನು ಮಾಡುತ್ತೀ?
**ಸೊಸೆ** : ನಾನು ಬೆಂಚಿನ ಮೇಲೆ ಕೂರುತ್ತೇನೆ
**ಅತೆ** : ನಾನು ಬೆಂಚಿನ ಮೇಲೆ ಕೂತರೆ?
**ಸೊಸೆ** : ನಾನು ಮಣೆ ಮೇಲೆ ಕೂರುತ್ತೇನೆ
**ಅತ್ತೆ** : ನಾನು ಮಣೆ ಮೇಲೆ ಕೂತರೆ?
**ಸೊಸೆ** : ನಾನು ನೆಲದ ಮೇಲೆ ಕೂರುತೇನೆ
**ಅತ್ತೆ** : ನಾನು ನೆಲದ ಮೇಲೆ ಕೂತರೆ?
**ಸೊಸೆ** : ನಾನು ಸಮಾಧಿಯೊಳಗೆ ಕೂರುತ್ತೇನೆ
**ಅತ್ತೆ** : ನಾನು ಸಮಾಧಿಯೊಳಗೆ ಕೂತರೆ?
**ಸೊಸೆ** : ಮಣ್ಣಾಕಿ ಹೂಳ್ತೇನೆ!!!

# ವಾರ್ತಾ ವಿಶೇಷ

## ಹಣಕಾಸು ನಿರ್ವಹಣೆ ಕಾರ್ಯಾಗಾರ



'ಸ್ವಯಂ ಸೇವಾ ಸಂಸ್ಥೆಗಳು ಉತ್ತರದಾಯಿತ್ವ ಮತ್ತು ಪಾರದರ್ಶಕತೆಗೆ ಹೆಚ್ಚು ಆದ್ಯತೆ ಕೊಡಬೇಕಾಗಿದೆ' ಎಂದು ವಂದನೀಯ ಸ್ವಾಮಿ ಪೀಟರ್ ಬ್ರ್ಯಾಂಕ್, ನಿರ್ದೇಶಕರು ಕ್ರಾಸ್ ಸಂಸ್ಥೆ, ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ನುಡಿದರು. ವಿವಿಧ ದಾನಿಗಳು ತಮ್ಮ ಶ್ರಮದ ಹಣವನ್ನು ಉತ್ತಮ ಉದ್ದೇಶಕಾಗಿ ನೀಡಿರುತ್ತಾರೆ. ಆದುದರಿಂದ ನಾವು ಸಾರ್ವಜನಿಕರಿಗೆ, ಸರ್ಕಾರಕ್ಕೆ ಉತ್ತರದಾಯಿಗಳಾಗಿದ್ದೇವೆ ಎಂದರು. ವಂದನೀಯ ಸ್ವಾಮಿ ಟ್ರೆವರ್ ಡಿ' ಸೋಜ ಓ.ಎಫ್.ಎಮ್ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕರ್ನಾಟಕದ ವಿವಿಧ ಸಂಘ ಸಂಸ್ಥೆಗಳ 50 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿ ಹಣಕಾಸು ನಿರ್ವಹಣೆಯ ಕುರಿತು ಮಾಹಿತಿ ಪಡೆದರು.

## ಸೇವೆಯ ಶ್ರೀಗಂಧ ಪಸರಿಸಲಿ ಎಲ್ಲೆಲ್ಲೂ-ದಾಖಲಾತಿ ಮತ್ತು ಸಂವಹನ ಕಾರ್ಯಾಗಾರ:




ದಿನಾಂಕ 8–4–2014ರಿಂದ 9–4–2014 ರವರೆಗೆ ಕ್ರಾಸ್ ಸಂಸ್ಥೆಯಲ್ಲಿ ದಾಖಲಾತಿ ಮತ್ತು ಸಂವಹನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ವಂದನೀಯ ಸ್ವಾಮಿ ಪೀಟರ್ ಬ್ರ್ಯಾಂಕ್, ನಿರ್ದೇಶಕರು ಕ್ರಾಸ್ ಸಂಸ್ಥೆ, ಕಾರ್ಯಾಗಾರವನ್ನು ಉದ್ಘಾಟಿಸುತ್ತಾ, ಕ್ರಾಸ್ ಸಂಸ್ಥೆ ಮತ್ತು ತನ್ನ 14 ಸಹಭಾಗಿ ಧರ್ಮಕ್ಷೇತ್ರಗಳ ಸಮಾಜ ಸೇವಾ ಸಂಸ್ಥೆಗಳು ಮುಖ್ಯವಾಹಿನಿಯಿಂದ ದೂರಸರಿಸಲ್ಪಟ್ಟ ಸಮುದಾಯಕ್ಕೆ ಉತ್ತಮ ಸೇವೆಯನ್ನು ನೀಡುತ್ತಿವೆ. ಆದರೆ ನಮ್ಮ ಈ ಕೆಲಸ ಕಾರ್ಯಗಳ ಬಗ್ಗೆ ಹೊರಪ್ರಪಂಚಕ್ಕೆ ಯಾವುದೇ ಮಾಹಿತಿ ಇಲ್ಲ. ಇದಕ್ಕೆ ಕಾರಣ ದಾಖಲಾತಿ ಪ್ರಕ್ರಿಯೆಯ ಕೊರತೆಯಾಗಿದೆ. ಆದುದರಿಂದ ಕಾರ್ಯಾಗಾರದಲ್ಲಿ ಭಾಗವಹಿಸುವ ಎಲ್ಲರೂ ಇದರ ಪ್ರಯೋಜನ ಹೊಂದಿ ತಮ್ಮ ಸಂಸ್ಥೆಗಳಲ್ಲಿ ಉತ್ತಮ ದಾಖಲಾತಿಗಳನ್ನು ನಿರ್ವಹಿಸಬೇಕು ಎಂದು ಹಾರೈಸಿದರು. ವಂದನೀಯ ಸ್ವಾಮಿ ವಿಜಯ ವಿಕ್ಟರ್ ಲೋಬೋ, ನಿರ್ದೇಶಕರು 'ಸಂದೇಶ', ಇವರು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ತಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಕಾರ್ಯಾಗಾರ ತಮಗೆ ಬಹು ಉಪಯುಕ್ತವಾಯಿತು ಎಂದು ತಿಳಿಸಿದರು. ಕ್ರಾಸ್ ಸಂಸ್ಥೆ ಮತ್ತು ತನ್ನ 14 ಸಹಭಾಗಿ ಧರ್ಮಕ್ಷೇತ್ರಗಳ ಸಮಾಜ ಸೇವಾ ಸಂಸ್ಥೆಗಳ 18 ಮಂದಿ ಈ ಕಾರ್ಯಾಗಾರದ ಪ್ರಯೋಜನ ಪಡೆದರು.

## ನೋಡಿಕಲಿ – ಕ್ಷೇತ್ರ ಬೇಟಿಯ ಮೂಲಕ ಹೆಚ್ಚಿನ ಕಲಿಕೆ:



ಬೆಂಗಳೂರು ವಿವಿದೋದ್ದೇಶ ಸಮಾಜ ಸೇವಾ ಸಂಸ್ಥೆ( ಬಿ ಎಮ್ ಎಸ್ ಎಸ್ ಎಸ್)ಯ ಮಹಿಳಾ ಸಶಕ್ತತಾ ಕಾರ್ಯಕ್ರಮದ ಕಾರ್ಯಕರ್ತರಿಗೆ ಹೆಚ್ಚಿನ ಕಲಿಕೆಗೆ ಚಿಕ್ಕಮಗಳೂರು ವಿವಿದೋದ್ದೇಶ ಸಮಾಜ ಸೇವಾ ಸಂಸ್ಥೆ(ಸಿ.ಎಮ್ ಎಸ್ ಎಸ್ ಎಸ್)ಗೆ ದಿನಾಂಕ 13–4–2014ರಿಂದ 15–4–2014ರವರೆಗೆ ಮಾಹಿತಿ ವಿನಿಮಯ ಮತ್ತು ಕ್ಷೇತ್ರ ಬೇಟಿ ವ್ಯವಸ್ಥೆ ಏರ್ಪಡಿಸಲಾಗಿತ್ತು. ಈ ಪ್ರಕ್ರಿಯೆ ಎರಡೂ ಸಂಸ್ಥೆಯ ಕಾರ್ಯಕರ್ತರಿಗೆ ಅನುಭವ ಹಾಗೂ ಜ್ಞಾನ ವಿನಿಮಯ ಮಾಡಲು ಮತ್ತು ತಮ್ಮ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಕಲಿಕೆಗೆ ನೆರವಾಯಿತು.

## ಫಲದತ್ತ ಪಯಣ – ಫಲಿತಾಂಶ ಆಧರಿತ ನಿರ್ವಹಣೆ ಕಾರ್ಯಾಗಾರ:



ದಿನಾಂಕ 22–4–2014ರಿಂದ 24–4–2014ರವರೆಗೆ ಫಲಿತಾಂಶ ಆಧರಿತ ನಿರ್ವಹಣೆ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆ, ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ವಂದನೀಯ ಸ್ವಾಮಿ ಪೀಟರ್ ಬ್ರ್ಯಾಂಕ್, ನಿರ್ದೇಶಕರು ಕ್ರಾಸ್ ಸಂಸ್ಥೆ, ಕಾರ್ಯಾಗಾರವನ್ನು ಉದ್ಘಾಟಿಸಿದರು. ಶ್ರೀ ಅಂಬ್ರೋಸ್ ಕ್ರಿಸ್ತಿ, ಚೆನ್ನೈ.(ನಿಕಟ ಪೂರ್ವ ವಲಯ ವ್ಯವಸ್ಥಾಪಕರು, ಕಾರಿಥಾಸ್ ಇಂಡಿಯ) ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಮುದಾಯ ಅಭಿವೃದ್ಧಿ ಕಾರ್ಯಕರ್ತರು ಈ ತನಕ ತಮ್ಮ ಅನುಕೂಲ ವಲಯದಲ್ಲೇ ಕಾರ್ಯವೆಸಗುತ್ತಿದ್ದರು ಈಗ ನಾವು ಹೆಚ್ಚಿನ ಶ್ರಮ ವಹಿಸಿ ಸಮಾಜ ಕಾರ್ಯದ ವಲಯವನ್ನು ವಿಸ್ತರಿಸಬೇಕಾಗಿದೆ ಎಂದರು. ಈ ಕಾರ್ಯಾಗಾರದಲ್ಲಿ ಕ್ರಾಸ್ ಸಂಸ್ಥೆಯ 6 ಸಹಭಾಗೀ ಸಂಸ್ಥೆಗಳ ಕಾರ್ಯಕರ್ತರು ಭಾಗವಹಿಸಿ ತಮ್ಮ ಅನುಭವ ಜ್ಞಾನ, ಮತ್ತು ಕೌಶಲ್ಯಗಳನ್ನು ವರ್ಧಿಸಿಕೊಂಡರು.

## ಜನರಿಂದ ಜನರೆಡೆಗೆ – ಪಂಚಾಯತ್ ರಾಜ್ ಕಾರ್ಯಾಗಾರದ ಅನುಸರಣಾ ಸಭೆ:



ದಿನಾಂಕ 10–5–2014ರಂದು ಪಂಚಾಯತ್ ರಾಜ್ ಕಾರ್ಯಾಗಾರದ ಅನುಸರಣಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಕಾರ್ಯಾಚರಿಸುತ್ತಿರುವ ಪ್ರಮುಖ ಸಮನಸ್ಕ ಸ್ವಯಂ ಸೇವಾ ಸಂಸ್ಥೆಗಳನ್ನು ಆಹ್ವಾನಿಸಲಾಗಿತ್ತು. ಈ ಸಭೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ಅಗತ್ಯ ತಿದ್ದುಪಡಿಗಳ ಬಗ್ಗೆ ಕೂಲಂಕುಶ ಚರ್ಚೆ ನಡೆಸಿ ಕರಡು ಮನವಿಯನ್ನು ಸಿದ್ಧಪಡಿಸಲಾಯಿತು.

ಗ್ರಾಮೀಣ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಬೇಕಾಗಿರುವುದು ಅತ್ಯಾವಶ್ಯಕವಾಗಿರುವ ಕಾರಣ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರಲ್ಲಿನ ವಿವಿಧ ಪ್ರಕರಣಗಳನ್ನು ಪರಿಶೀಲಿಸಿ ಅವಶ್ಯ ತಿದ್ದುಪಡಿಯನ್ನು ಸೂಚಿಸಲು ಮಾಜಿ ವಿಧಾನ ಸಭಾಧ್ಯಕ್ಷರು ಹಾಗೂ ಹಾಲಿ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಕೆ.ಆರ್. ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದೆ.ಈ ಸಮಿತಿಯ ಮುಂದೆ ದಿನಾಂಕ 16–6–2014ರಂದು ವರದಿಯನ್ನು ಪ್ರಸ್ತುತ ಪಡಿಸಲಾಯಿತು.

## ಶಾಂತಿಗಾಗಿ ಶ್ರಮಿಸುವವರು – ನ್ಯಾಯ, ಶಾಂತಿ ಮತ್ತು ಅಭಿವೃದ್ಧಿಗಾಗಿನ ಆಯೋಗದ ಸಭೆ:



ದಿನಾಂಕ 5–6–2014ರಂದು ನ್ಯಾಯ, ಶಾಂತಿ ಮತ್ತು ಅಭಿವೃದ್ಧಿಗಾಗಿನ ಆಯೋಗದ ಸಭೆಯನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಈ ಆಯೋಗದ ಕರ್ನಾಟಕದ ಎಲ್ಲಾ ನಿರ್ದೇಶಕರುಗಳು ಸಭೆಯಲ್ಲಿ ಭಾಗವಹಿಸಿದರು. ವಂದನೀಯ ಸ್ವಾಮಿ ಡಾ.ಚಾರ್ಲ್ಸ್ ಇರುದಯಂ, ಕಾರ್ಯದರ್ಶಿ –ನ್ಯಾಯ, ಶಾಂತಿ ಮತ್ತು ಅಭಿವೃದ್ಧಿಗಾಗಿನ ಆಯೋಗ, ನವದೆಹಲಿ ಈ ಸಭೆಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಆಯೋಗದ ಕಾರ್ಯ ಚಟುವಟಿಕೆಗಳನ್ನು ಸದಸ್ಯರಿಗೆ ವಿವರಿಸಿದರು. ಈ ಕಾರ್ಯ ವಿಧಾನ ಮತ್ತು ಮುಂದಿನ ಸವಾಲುಗಳು ಇದರ ಬಗ್ಗೆ ಚರ್ಚಿಸಲಾಯಿತು.



## ಶುಭಕಾಮನೆಗಳು:

ಶಿವಮೊಗ್ಗ ಧರ್ಮಕ್ಷೇತ್ರದ ನೂತನ ಧರ್ಮಾಧ್ಯಕ್ಷರಾಗಿ ಪರಮಪೂಜ್ಯ ಡಾ. ಫ್ರಾನ್ಸಿಸ್ ಸೆರಾವೊ ಅವರು ಧಾರ್ಮಿಕ ಸಮಾರಂಭದಲ್ಲಿ ಅಭಿಷೇಕ ಹೊಂದಿ ಅಧಿಕಾರ ವಹಿಸಿಕೊಂಡರು. ಪೂಜ್ಯರು ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ತಜ್ಞರಾಗಿದ್ದಾರೆ. ಅವರ ಸೇವೆಯಲ್ಲಿ ಕ್ರಾಸ್ ಸಂಸ್ಥೆ, ಶುಭವನ್ನು ಕೋರುತ್ತಾ ಎಲ್ಲಾ ರೀತಿಯ ಸಹಕಾರದ ಭರವಸೆ ನೀಡುತ್ತದೆ. ನೂತನ ಧರ್ಮಾಧ್ಯಕ್ಷರ ನೇತೃತ್ವದಲ್ಲಿ ಧರ್ಮಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲಿ ಎಂದು ಹಾರೈಸುತ್ತದೆ.

ವಂದನೆ, ಸ್ವಾಗತ

# ಜೀವನ ಕಥನ : ದೀನರ ಧ್ವನಿ ಶ್ರೀಮತಿ ವಾಣಿ



ನಾನು ಮಂಗಳೂರು ತಾಲೂಕು ತಲಪಾಡಿ ಗ್ರಾಮ ನಿವಾಸಿ ರಾಜು ಪೂಜಾರಿಯವರ ಪತ್ನಿ ವಾಣಿ. 2005 ರಲ್ಲಿ ಸಿ.ಓ.ಡಿ.ಪಿ ಸಂಸ್ಥೆಗೆ ಸಾಮಾಜಿಕ ಕಾರ್ಯಕರ್ತೆಯಾಗಿ ಸೇರಿಕೊಂಡೆ. ನಂತರ ಸಂಸ್ಥೆಯ ವತಿಯಿಂದ ಹಕ್ಕುಗಳು, ನಾಯಕತ್ವ ಶಿಬಿರ, ಲಿಂಗತಾರತಮ್ಯ, ಪಂಚಾಯತ್‌ರಾಜ್ ಇತ್ಯಾದಿ ಮಾಹಿತಿ ಹಾಗೂ ತರಬೇತಿಗಳು ದೊರಕಿದವು. ಮೊದಲಿಗೆ ಇಂತಹ ವಿಚಾರಗಳ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಇದರಿಂದ ನನ್ನಲ್ಲಿ ಆತ್ಮವಿಶ್ವಾಸ, ದಿಟ್ಟತನ, ತಪ್ಪನ್ನು

ಖಂಡಿಸುವಂತ ಮನೋಭಾವ ಬೆಳೆದು ಬಂತು. ಹಾಗೇ ಅನೇಕ ಮಹಿಳೆಯರನ್ನು ಸಂಘಟಿಸಿ ಸಂಘಗಳನ್ನು ರಚಿಸಿ ಆ ಸದಸ್ಯರಿಗೆ ಮಾಹಿತಿ ನೀಡುವ ಮೂಲಕ ಮಾತುಗಾರಿಕೆಯನ್ನು ಬೆಳೆಸಿಕೊಂಡೆ. ಯಾವುದೇ ಸರಕಾರಿ ಅಥವಾ ಸರಕಾರೇತರ ಸಂಸ್ಥೆಯ ಅಧಿಕಾರಿಗಳನ್ನು ಯಾವುದೇ ಅಳುಕಿಲ್ಲದೆ ಭೇಟಿಯಾಗಿ ವಿಷಯ ಚರ್ಚಿಸುವ ಧೈರ್ಯ ಬಂದಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮೂರಲ್ಲಿ ಎಲ್ಲರೂ ನನ್ನನ್ನು ಗುರುತಿಸುತ್ತಾರೆ. ಕೆಲವು ಸಂಘ ಸಂಸ್ಥೆಗಳು ಅವರ ಕಾರ್ಯಕ್ರಮಕ್ಕೆ ನನ್ನನು ಅತಿಥಿಯಾಗಿ ಆಹ್ವಾನಿಸುತ್ತಾರೆ. ಊರಲ್ಲಿ ಅವ್ಯವಹಾರ, ದೌರ್ಜನ್ಯ ಇತ್ಯಾದಿ ವಿಷಯಗಳು ಬಂದಾಗ ನನ್ನನ್ನು ಭೇಟಿಯಾಗಿ ವಿಷಯ ಹಂಚಿಕೊಳ್ಳುತ್ತಾರೆ. ಈಗಾಗಲೇ ಕೆಲವು ಬಾರಿ ಚುನಾವಣೆಗೆ ಸ್ಪರ್ಧಿಸುವಂತೆ ನಮ್ಮೂರಿನ ಜನರಿಂದ ಒತ್ತಾಯ ಬಂದಿದೆ. ಗ್ರಾಮಪಂಚಾಯತ್ ವತಿಯಿಂದ ಯಾವುದೇ ಕಾರ್ಯಕ್ರಮ ನಡೆಯುವಾಗ ಪ್ರತ್ಯೇಕವಾಗಿ ಆಹ್ವಾನಿಸುತ್ತಾರೆ. ಅದೇ ರೀತಿ ನನ್ನ ಸಂಸಾರದಲ್ಲಿ ಕೂಡಾ ವಿವಿಧ ಬೆಳವಣಿಗೆಯನ್ನು ಕಂಡುಕೊಂಡಿದ್ದೇನೆ. ಮನೆಯಲ್ಲಿ ಗಂಡ, ನಾನು ಮತ್ತು ಮಗಳು ಮೂರು ಜನ ಇರುವುದರಿಂದ ಮನೆಕೆಲಸಗಳನ್ನು ಹಂಚಿಕೊಂಡು ಮಾಡುತ್ತೇವೆ. ಗಂಡು, ಹೆಣ್ಣೆಂಬ ಬೇಧಭಾವವಿಲ್ಲದೆ ಮಗಳನ್ನು ಬೆಳೆಸಿ ಒಳ್ಳೆ ವಿದ್ಯಾಭ್ಯಾಸವನ್ನು ನೀಡುತ್ತಿದ್ದೇವೆ. ನನ್ನನ್ನು ಗುರುತಿಸಿದ ತಲಪಾಡಿ ವಿಜಯಾಬ್ಯಾಂಕ್‌ನವರು ನನಗೆ ಬ್ಯಾಂಕ್ ಸಾಲ ನೀಡಿದ್ದಾರೆ. ಅದರಿಂದ ಸ್ವಂತ ಜಾಗ ಕೊಂಡು ಮನೆಕಟ್ಟಿಸಿದೆ. ಜಾಗ, ಮನೆ ನನ್ನ ಹೆಸರಿಗೆ ಇದ್ದು ಹಾಗೇ ಆರ್ಥಿಕವಾಗಿ ಅಲ್ಪ ಸ್ವಲ್ಪ ಉಳಿತಾಯ ಮಾಡುತ್ತಿದ್ದೇನೆ. ನಾನು ಜೀವನದಲ್ಲಿ ಇಷ್ಟು ಬದಲಾವಣೆ ಹೊಂದಿದ್ದೇನೆ ಅಂದ್ರೆ ಅದಕ್ಕೆ ಸಿ.ಒ.ಡಿ.ಪಿ ಸಂಸ್ಥೆ ಕಾರಣವಾಗಿದೆ.

## ನಿಮಗಿದೋ ವಂದನೆ



ವಂ. ಸ್ವಾಮಿ. ಪೌಲ್ ರಾಜ್
ನಿಕಟ ಪೂರ್ವ – ನಿರ್ದೇಶಕರು
ಬಿ.ಡಿ.ಡಿ.ಎಸ್. – ಬಳ್ಳಾರಿ



ವಂ. ಸ್ವಾಮಿ. ಫೆಲಿಕ್ಸ್ ಥಾಮಸ್ ರೊಸಾರಿಯೊ
ನಿಕಟ ಪೂರ್ವ – ನಿರ್ದೇಶಕರು
ಸಿ.ಎಮ್.ಎಸ್.ಎಸ್.ಎಸ್. – ಹಾಸನ



ವಂ. ಸ್ವಾಮಿ. ಆಲ್ವಿನ್ ತಂಗನಾಥನ್
ನಿಕಟ ಪೂರ್ವ – ನಿರ್ದೇಶಕರು
ಬಿ.ಎಮ್.ಎಸ್.ಎಸ್.ಎಸ್. – ಬೆಂಗಳೂರು

## ನಿರ್ದೇಶಕ ಮಂಡಳಿಗೆ ಸ್ವಾಗತ



ವಂ. ಸ್ವಾಮಿ. ಅಮರನಾಥ ದಿನೇಶ ರಾಯಿ
ನಿರ್ದೇಶಕರು – ಬಿ.ಎಮ್.ಎಸ್.ಎಸ್.ಎಸ್.
ಪಿ.ಬಿ. ನಂ. 4626, ನಂ. 5,
ನಂದಿದುರ್ಗ ರಸ್ತೆ, ಬೆಂಗಳೂರು – 560 046.



ವಂ. ಸ್ವಾಮಿ. ಮಾರ್ಸೆಲ್ ಪಿಂಟೊ
ನಿರ್ದೇಶಕರು – ಸಿ.ಎಮ್.ಎಸ್.ಎಸ್.ಎಸ್.
ಸೇವಾ ಸಂಸ್ಥೆ, ಬಿ. ಕಾಟಿಹಳ್ಳಿ,
ಅರಸೀಕೆರೆ ರಸ್ತೆ, ಹಾಸನ – 573201



ವಂ. ಸ್ವಾಮಿ. ಚೌರಪ್ಪ ಯೆರೆಪ್ಪ
ನಿರ್ದೇಶಕರು – ಬಿ.ಡಿ.ಡಿ.ಎಸ್.
ಇನ್‌ಫಾಂಟ್ರಿ ರಸ್ತೆ, ಕಂಟೋನ್ಮೆಂಟ್,
ಬಳ್ಳಾರಿ – 583104



ವಂ. ಸ್ವಾಮಿ. ರೆಜಿನಾಲ್ಡ್ ಪಿಂಟೊ
ನಿರ್ದೇಶಕರು – ಸಂಪದ, ಉಡುಪಿ
ಧರ್ಮಾಧ್ಯಕ್ಷರ ನಿವಾಸ,
ಮದರ್ ಆಫ್ ಸೊರೋಸ್ ಚರ್ಚ
ಉಡುಪಿ ಅಂಚೆ – 576101

**Speech Marks:**
“Tears of a mother cannot save her Child. But your Blood can. Donate Blood – Save Lives”
“Tobacco use is the single most preventable cause of death globally and is currently responsible for 10% of adult deaths worldwide”.
“Remaining silent in the face of injustice is the same as supporting it.” (Courtesy Internet)

ಪ್ರತಿಗಳಿಗಾಗಿ ಸಂಪರ್ಕಿಸಿ :
**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**
ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com